ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ

2325 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಲ್ಪಟ್ಟ ಎಲ್ಲಾ ವಿಧಾನ ಸಭಾ ಕ್ಷೇತ್ರಗಳು ತಾಲ್ಲೂಕುಗಳು ಮಲೆನಾಡಿನಲ್ಲಿವೆಯೇ?*

ಆ) *ಮಲೆನಾಡಿನಲ್ಲಿ ಇರುವ ಪ್ರದೇಶಗಳ ತಾಲ್ಲೂಕುಗಳಿಗೆ ಈಗಿನ ನಿರ್ಣಯದಂತೆ ಕ್ಷೇತ್ರವಾರು ಅನುದಾನ ನೀಡಿದರೆ ಅನ್ಯಾಯವಾಗುವುದಿಲ್ಲವೇ?*

ಇ) *ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಇದೆ

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲಾ

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, 'ಮಲೆ' ಎಂದರೆ ಅರಣ್ಯ ಅಥವಾ ಗುಡ್ಡಗಾಡು ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಸಿಟಿ ಕಾರ್ಪೊರೇಶನ್‌ಗಳು, ಬಯಲು ಸೀಮೆಯ ಪ್ರದೇಶಗಳು ಮತ್ತು ಸಮುದ್ರ ಕಿನಾರಗಳು ಸೇರಿವೆ. ಅಂದರೆ ಇವುಗಳು ಪರ್ವತ ಪ್ರದೇಶಗಳಿಗೆ ಸೇರಿದೆ ಎಂದು ತಾವು ಜಸ್ಟಿಫೈಯನ್ನು ಮಾಡಿಕೊಡುತ್ತೀರ? ಇದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಈ ರೀತಿ ರಾಜಕೀಯ ಪ್ರೇರಿತವಾದ ನಿರ್ಣಯ ಪ್ರಕಾರ ಪ್ರದೇಶಗಳು ಸೇರುತ್ತಿರುವುದರಿಂದ ನಿಜವಾದ ಮಲೆನಾಡಿನ ಜನರಿಗೆ ಹಾನಿಯಾಗಿದೆಯೇ ಎಂದು ಕೇಳಿದರೆ ಇವರು ಇಲ್ಲ ಎಂದು ಹೇಳುತ್ತಾರೆ. ಈಗ ಕಾರ್ಪೊರೇಷನ್‌ಗಳು, ಸಮುದ್ರ ಹತ್ತಿರದಲ್ಲಿರತಕ್ಕಂಥ ಬಯಲು ಸೀಮೆಗಳು ಇವೂ ಕೂಡ ಮಲೆನಾಡು ಹೇಗಾಗುತ್ತದೆ? ಇದನ್ನು ಜಸ್ಟಿಫೈ ಮಾಡಿಕೊಡುತ್ತೀರ? ನಾನು ಕೇಳಿದ ಎರಡನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ, ಮಲೆನಾಡಿನ ಪ್ರದೇಶದಲ್ಲಿ ತಾಲ್ಲೂಕಿನ ಹಿನ್ನಲೆಯಲ್ಲಿ ಕ್ಷೇತ್ರವಾರು ಅನುದಾನ ನೀಡಿದರೆ ಅನ್ಯಾಯವಾಗುವುದಿಲ್ಲವೇ ಎಂದು ಕೇಳತಕ್ಕಂಥದ್ದಕ್ಕೆ, ಕ್ಷೇತ್ರವಾರು ಕೊಡಬೇಕು ಎಂದು ನಿರ್ಣಯ ಮಾಡಿದ್ದಾರೆ. ಮಲೆನಾಡಿನ ಪ್ರದೇಶದಲ್ಲಿ ಜನ ಸಾಂದ್ರತೆ ಕಡಿಮೆ. ಅದಕ್ಕಾಗಿ ಎರಡು-ಮೂರು ತಾಲ್ಲೂಕುಗಳು ಸೇರಿ ಒಂದು ಕ್ಷೇತ್ರವಾಗುತ್ತದೆ. ಅಂದರೆ ಮೂರು ತಾಲ್ಲೂಕುಗಳಿಗೆ ಮಲೆನಾಡಿನ ಪ್ರದೇಶದಲ್ಲಿ ಅನುದಾನ ಕೊಡುವಷ್ಟು ಉಳಿದ ಪ್ರದೇಶದಲ್ಲಿ ಅಂದರೆ ಪಕ್ಕದ ಪ್ರದೇಶದಲ್ಲಿ ಹಾಗೂ ಬಯಲು ಸೀಮೆ ಪ್ರದೇಶಗಳಿಗೆ ಯಾವುದು ಇನ್‌ಕ್ಲೂಡ್ ಆಗಲಿಕ್ಕೆ ಸಾಧ್ಯವಿಲ್ಲವೋ ಅಂಥ ಪ್ರದೇಶಗಳಿಗೆ ಕೊಡುತ್ತಿದ್ದೀರಿ, ಇದರಿಂದ ಅನ್ಯಾಯವಾಗುವುದಿಲ್ಲವೇ ಎಂದು ಕೇಳಿದರೆ ಉತ್ತರದಲ್ಲಿ ಇಲ್ಲವೆಂದು ಕೊಟ್ಟಿದ್ದಾರೆ. ಈ ಉತ್ತರ ಸರಿಯಾಗಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಸಹ 125 - 130 ಇಂಚು ಮಳೆ ಬೀಳತಕ್ಕಂಥ ಪ್ರದೇಶದಿಂದ ಬರತಕ್ಕಂಥವನು. ಮಾನ್ಯ ಸದಸ್ಯರು ಕೂಡ ಅಂಥ ಪ್ರದೇಶದಿಂದ ಬರತಕ್ಕವರೇ, ಇವೊತ್ತು ಇದರ ಬಗ್ಗೆ ತೀರ್ಮಾನ ಮಾಡಿದ್ದಾರೆ. ಯಾವ ಯಾವ ಪ್ರದೇಶಗಳು ಮಲೆನಾಡು ಅಬಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರಬೇಕು ಎಂದು ಹೇಳಿ ತೀರ್ಮಾನ ಮಾಡಿದ್ದಾರೆ. ಇದರ ಬಗ್ಗೆ ನಾವು ಕುಳಿತುಕೊಂಡು ಯೋಚನೆ ಮಾಡಬೇಕಾಗುತ್ತದೆ ಎಂದು ನನಗನ್ನಿಸುತ್ತದೆ. ಈಗ ಮಳೆ

ಕಡಿಮೆ ಬೀಳತಕ್ಕಂಥ ಕೆಲವು ಬಯಲು ಸೀಮೆಯ ಪ್ರದೇಶಗಳೂ ಕೂಡ ಸೇರಿವೆ. ಮಲೆನಾಡು ಅಭಿವೃದ್ಧಿ ಮಂಡಳಿ ಎಂದರೆ ಅದು ಮಲೆನಾಡಿಗೆ ಸೀಮಿತವಾಗಿರತಕ್ಕದ್ದು ಎಂಬುದರಲ್ಲಿ ಎರಡನೆ ಪ್ರಶ್ನೆಯಿಲ್ಲ, ಆದುದರಿಂದ ಇದರ ಬಗ್ಗೆ ಪರಿಶೀಲನೆಯನ್ನು ಮಾಡಿ ಆಲೋಚನೆ ಮಾಡೋಣ ಎಂದು ನಾನು ಹೇಳುತ್ತೇನೆ.

ಡಾ|| ಎಂ.ಪಿ. ಕರ್ಕಿ : ಈಗಾಗಲೇ ಕೊಟ್ಟಿರುವ ಉತ್ತರದಲ್ಲಿ You are justyfying it. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಲ್ಪಟ್ಟ ಎಲ್ಲಾ ವಿಧಾನಸಭಾ ಕ್ಷೇತ್ರಗಳು ತಾಲ್ಲೂಕುಗಳು ಮಲೆನಾಡಿನಲ್ಲಿವೆಯೇ ಎಂದು ಕೇಳಿದರೆ ಇದೆ ಎಂದು ಹೇಳಿದ್ದಾರೆ. That is not a correct answer. ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರೆ ಸರಿಯಾಗಿರುತ್ತಿತ್ತು. ಇದರಲ್ಲಿ ಅನ್ಯಾಯ ಆಗಿಲ್ಲವೇ ಎಂದು ಕೇಳಿದರೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಆಗಿರುವ ಅನ್ಯಾಯವನ್ನು ಸರಿಪಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದರೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಆದ್ದರಿಂದ ತಾವು ತಮ್ಮ ಉತ್ತರವನ್ನು ಸರಿಪಡಿಸಿಕೊಳ್ಳುತ್ತೀರಿ ಎಂದು ನಾನು ಭಾವಿಸಿಕೊಳ್ಳುತ್ತೇನೆ, ಹಾಗೆ ಭಾವಿಸಿಕೊಳ್ಳಬಹುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಕಾನೂನಿನ ರೀತಿಯಲ್ಲಿ ಕ್ಷೇತ್ರವಾರು ಹಣ ಹಂಚುತ್ತಿದ್ದೇವೆ. ಇದರಲ್ಲಿ ಅನ್ಯಾಯವಾಗಿಲ್ಲ ಎಂದು ಹೇಳಿ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಉತ್ತರದಲ್ಲಿ ತಪ್ಪು ಏನೂ ಆಗಿಲ್ಲ, ಆದರೆ ಮಾನವೀಯತೆಯ ದೃಷ್ಟಿಯಿಂದ ಮಲೆನಾಡು ಬಯಲು ಸೀಮೆ ಎಂದು ವಿಂಗಡಣೆ ಮಾಡತಕ್ಕಂಥದ್ದರಲ್ಲಿ ವ್ಯತ್ಯಾಸವಾಗಿದೆ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಈಗ ಅವರು ಕೊಟ್ಟಿರತಕ್ಕಂಥದ್ದರಲ್ಲಿ ಕ್ಷೇತ್ರವಾರು ಹಂಚಿದ್ದಾರೆ ಮತ್ತು ಇದು ನ್ಯಾಯವಾಗಿಯೂ ಇದೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆ, ಮಲೆನಾಡಿನಲ್ಲಿ ಜನಸಾಂದ್ರತೆ ಕಡಿಮೆ. ಹಾಗಾಗಿ ಒಂದು ಕ್ಷೇತ್ರದಲ್ಲಿ 3 ತಾಲ್ಲೂಕುಗಳು ಬರುತ್ತವೆ. ನೀವು ತಾಲ್ಲೂಕುವಾರು ಹಂಚಿಕೆ ಮಾಡದೇ ಕ್ಷೇತ್ರವಾರು ಹಂಚಿಕೆ ಮಾಡಿದರೆ ಈಗ ಬಯಲು ಸೀಮೆಯಲ್ಲಿ ಜನಸಾಂದ್ರತೆ ಜಾಸ್ತಿ. ಇದು ಈಗ ಸೇರಿರತಕ್ಕಂಥಾದ್ದು. ಅಂಥವರಿಗೆ ಕೊಡತಕ್ಕಂಥದ್ದು ಒಂದು ತಾಲ್ಲೂಕಿಗೆ ಕೊಡತಕ್ಕಂಥದ್ದನ್ನು ನೀವು ಮೂರು ತಾಲ್ಲೂಕುಗಳಿಗೆ ಕೊಡುತ್ತಿದ್ದಿರಿ. ಇದು ಅಲ್ಲದೇ ಅನ್ಯಾಯವಾಗಿಲ್ಲ ಎಂದು ಜಸ್ಟಿಫೈ ಬೇರೆ ಮಾಡುತ್ತೀರಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಸ್ನೇಹಿತರು ನನ್ನ ಅನಿಸಿಕೆಗಳನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಆ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಇದನ್ನು ಜನ ಸಾಂದ್ರತೆಯ ಮೇಲೆ ಕೊಡುತ್ತಿಲ್ಲ, ಕ್ಷೇತ್ರವಾರು ಏನಿದೆ ಆ ಪ್ರಕಾರ ಹಂಚಿದ್ದಾರೆ. ಇಲ್ಲಿ ಜನ ಸಂಖ್ಯೆಯ ಪ್ರಶ್ನೆ ಉದ್ಭವಿಸುವುದಿಲ್ಲ, ಕ್ಷೇತ್ರಾವಾರು ಹಂಚುವುದರಿಂದ ಪ್ರತಿ ಕ್ಷೇತ್ರದಲ್ಲಿ ಇಷ್ಟು ಕೊಟ್ಟಿದ್ದಾರೆ. ಮಾನ್ಯ ಸ್ನೇಹಿತರು ತಾಲ್ಲೂಕು ವೈಸ್ ಕೊಟ್ಟರೆ ಮಲೆನಾಡು ಪ್ರದೇಶದಲ್ಲಿ ಬಹಳ ಅನುಕೂಲವಾಗುವುದಿಲ್ಲವೇ ಎಂದು ಕೇಳುತ್ತಿದ್ದಾರೆ. ಅದನ್ನು ಪರಿಶೀಲಿಸಲಾಗುವುದು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಕ್ಷೇತ್ರವಾರು ಕೊಡಬೇಕು, ಇಲ್ಲದೇ ಹೋದರೆ ನಮ್ಮ ಬಯಲುನಾಡಿಗೆಲ್ಲ ಬಹಳ ತೊಂದರೆಯಾಗುತ್ತದೆ. ನಮಗೆ ಸವಲತ್ತುಗಳು ಬಹಳ ಕಡಿಮೆ ಇದೆ.

ಶ್ರೀ ಕೆ. ಜಯರಾಮ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಮ್ಮ ಮಲೆನಾಡಿನ ಬಗ್ಗೆ ಈಗಾಗಲೇ ನಮ್ಮ ಕರ್ತವ್ಯವರು ಮತ್ತು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ನಮ್ಮ ಮಂಗಳೂರು ತಾಲ್ಲೂಕಿನಲ್ಲಿ ಒಂದು

ತಾಲ್ಲೂಕಿನಲ್ಲಿ ನಾಲ್ಕು ವಿಧಾನ ಸಭಾ ಕ್ಷೇತ್ರಗಳು ಬರುತ್ತವೆ. ಆದ್ದರಿಂದ ನಾವೆಲ್ಲಾ ಸೇರಿಕೊಂಡು ಕ್ಷೇತ್ರವಾರು ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಇದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಪರಿಶೀಲಿಸುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಪರಿಶೀಲಿಸುತ್ತಾರೆಯೇ ಎನ್ನುವ ಬಗ್ಗೆ ನನಗೆ ಖಚಿತವಾದ ಉತ್ತರ ಬೇಕು.

Mr. SPEAKER : It is a valid suggestion.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ನಿಮ್ಮ ಅನಿಸಿಕೆ ನನಗೆ ಅರ್ಥವಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕು ಎಂದರೆ ಇದರಲ್ಲಿ ಸ್ವಲ್ಪ ವ್ಯತ್ಯಾಸಗಳಾಗಿದೆ ಎನ್ನುವುದಕ್ಕೋಸ್ಕರವೇ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿರುವುದು, ಇಲ್ಲದಿದ್ದರೆ ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕಿರಿಯ ಕಾಲೇಜುಗಳು

2229 - ಶ್ರೀ ಬಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಷ್ಟು ಶಾಲೆ, ಕಿರಿಯ ಕಾಲೇಜು ಇವೆ (ತಾಲ್ಲೂಕುವಾರು ವಿವರ ನೀಡುವುದು).

ಆ) ಮೇಲ್ಕಂಡ ಕಿರಿಯ ಕಾಲೇಜುಗಳಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಎಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ)

	ಸರ್ಕಾರಿ	ಖಾಸಗಿ
ಪ್ರಾಥಮಿಕ ಶಾಲೆಗಳು	2172	125
ಪ್ರೌಢಶಾಲೆಗಳು	58	160
ಕಿರಿಯ ಕಾಲೇಜುಗಳು	24	12

(ತಾಲ್ಲೂಕುವಾರು ವಿವರದ ಪಟ್ಟಿ ಲಗತ್ತಿಸಿದೆ)

ಆ)

	ಬೋಧಕ	ಬೋಧಕೇತರ
ಸರ್ಕಾರಿ ಪದವಿ ಪೂರ್ವ ಕಾಲೇಜುಗಳು	249	50
ಖಾಸಗಿ ಪದವಿ ಪೂರ್ವ ಕಾಲೇಜುಗಳು	67	32

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಶಾಲೆ, ಕಾಲೇಜುಗಳ ತಾಲ್ಲೂಕುವಾರು ವಿವರದ ಪಟ್ಟಿ

ತಾಲ್ಲೂಕು		ಸರ್ಕಾರಿ ಪ್ರಾಥಮಿಕ	ಖಾಸಗಿ ಪ್ರಾಥಮಿಕ	ಸರ್ಕಾರಿ ಪ್ರೌಢ ಶಾಲೆ	ಖಾಸಗಿ ಪ್ರೌಢ ಶಾಲೆ	ಸರ್ಕಾರಿ ಕಿರಿಯ ಕಾಲೇಜು	ಖಾಸಗಿ ಕಿರಿಯ ಕಾಲೇಜು
1.	ಚನ್ನಪಟ್ಟಣ	222	13	08	19	3	2
2.	ರಾಮನಗರ	237	13	07	22	3	2